# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 95 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | **19.12.2022** |
| ಉತ್ತರಿಸುವ ಸಚಿವರು | : | ಮಾನ್ಯ ಉನ್ನತ ಶಿಕ್ಷಣ ಸಚಿವರು |

| ಪ್ರಶ್ನೆ ಸಂ. | ಪ್ರಶ್ನೆ | ಉತ್ತರ |
|---|---|---|
| **(ಅ)** | ರಾಜ್ಯದಲ್ಲಿ 1987ಕ್ಕೆ ಮೊದಲು ಪ್ರಾರಂಭಿಸಿದ 32 ಖಾಸಗಿ ಪಾಲಿಟೆಕ್ನಿಕ್‌ಗಳನ್ನು ವೇತನಾನುದಾನಕ್ಕೆ ಒಳಪಡಿಸಿ 2013ರಲ್ಲಿ ಸರ್ಕಾರ ಆದೇಶ ಹೊರಡಿಸಿರುವುದು ನಿಜವೆ? (ಪಾಲಿಟೆಕ್ನಿಕ್‌ಗಳ ವಿವರ ನೀಡುವುದು) | ಹೌದು.<br><br>ಸರ್ಕಾರದ ಆದೇಶ ಸಂಖ್ಯೆ:ಇಡಿ 101 ಟಿಪಿಇ 2012, ದಿನಾಂಕ:13.02.2013ರಲ್ಲಿ ದಿನಾಂಕ: 01.06.1987ಕ್ಕಿಂತ ಪೂರ್ವದಲ್ಲಿ ಪ್ರಾರಂಭಿಸಲ್ಪಟ್ಟ ಹಾಗೂ 15 ವರ್ಷಗಳ ಅಸ್ತಿತ್ವವನ್ನು ಪೂರೈಸಲ್ಪಟ್ಟಿರುವ 15 ಖಾಸಗಿ ಪಾಲಿಟೆಕ್ನಿಕ್‌ಗಳನ್ನು ನಿಗದಿತ ಷರತ್ತುಗಳನ್ನು ಪಾಲಿಸುವ ನಿಬಂಧನೆಗೊಳಪಟ್ಟು ತಾತ್ವಿಕವಾಗಿ ಸರ್ಕಾರದ ವೇತನಾನುದಾನಕ್ಕೆ ಒಳಪಡಿಸಿ ಆದೇಶಿಸಿದೆ. ಪಾಲಿಟೆಕ್ನಿಕ್‌ಗಳ ವಿವರಗಳು ಈ ಕೆಳಕಂಡಂತಿವೆ.<br>1) ಶ್ರೀ ವೆಂಕಟರಾಜು ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು.<br>2) ಎಂ ಇ ಎಸ್ ಪಾಲಿಟೆಕ್ನಿಕ್, ಮಧುಗಿರಿ<br>3) ಬಿ ಇ ಟಿ ಪಾಲಿಟೆಕ್ನಿಕ್, ಕೆ ಎಂ ದೊಡ್ಡಿ, ಮಂಡ್ಯ<br>4) ಎಂ ಇ ಎಸ್ ಪಾಲಿಟೆಕ್ನಿಕ್, ರಾಜಪುರ, ಗುಲ್ಬರ್ಗಾ<br>5) ಆದರ್ಶ ಪಾಲಿಟೆಕ್ನಿಕ್, ಆರ್ ಟಿ ನಗರ, ಬೆಂಗಳೂರು<br>6) ರಾಯಬಾಗ್ ಪಾಲಿಟೆಕ್ನಿಕ್, ರಾಯಬಾಗ್, ಬೆಳಗಾವಿ ಜಿಲ್ಲೆ<br>7) ಎಚ್ ಕೆ ಇ ಎಸ್ ಮಹಿಳಾ ಪಾಲಿಟೆಕ್ನಿಕ್, ಗುಲ್ಬರ್ಗಾ<br>8) ಎಚ್ ಕೆ ಇ ಎಸ್ ಪಾಲಿಟೆಕ್ನಿಕ್, ಗುಲ್ಬರ್ಗಾ<br>9) ಮೊಹಮ್ಮದ್ ಷರೀಫ್ ಪಾಲಿಟೆಕ್ನಿಕ್, ಬೆಂಗಳೂರು<br>10) ಕೆ ಜೆ ಟಿ ಇ ಟಿ ಪಾಲಿಟೆಕ್ನಿಕ್, ಮುಳಬಾಗಿಲು, ಕೋಲಾರ ಜಿಲ್ಲೆ<br>11) ಎಂ ಎನ್ ಪಾಲಿಟೆಕ್ನಿಕ್ ಇನ್ಸ್ಟಿಟ್ಯೂಟ್, ಬೆಂಗಳೂರು<br>12) ಎಸ್ ಎಸ್ ಆರ್ ಪಾಲಿಟೆಕ್ನಿಕ್, ಜೇವರ್ಗಿ, ಗುಲ್ಬರ್ಗ ಜಿಲ್ಲೆ |

| | | |
|---|---|---|
| | | 13) ತೋಂಟದಾರ್ಯ ಪಾಲಿಟೆಕ್ನಿಕ್, ಗದಗ<br>14) ಜಿಎಸ್‌ಎಸ್ ಪಾಲಿಟೆಕ್ನಿಕ್, ಮೈಸೂರು<br>15) ಎಚ್ ಕೆ ಇ ಎಸ್ ಪಾಲಿಟೆಕ್ನಿಕ್, ರಾಯಚೂರು<br><br>ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ:ಇಡಿ 101 ಟಿಪಿಇ 2012, ದಿನಾಂಕ:16.03.2013ರಲ್ಲಿ 16 ಪಾಲಿಟೆಕ್ನಿಕ್‌ಗಳನ್ನು ನಿಗದಿತ ಷರತ್ತುಗಳನ್ನು ಪಾಲಿಸುವ ನಿಬಂಧನೆಗೊಳಪಟ್ಟು ತಾತ್ವಿಕವಾಗಿ ಸರ್ಕಾರದ ವೇತನಾನುದಾನಕ್ಕೆ ಒಳಪಡಿಸಿ ಆದೇಶಿಸಲಾಗಿದೆ. ಪಾಲಿಟೆಕ್ನಿಕ್‌ಗಳ ವಿವರಗಳು ಈ ಕೆಳಕಂಡಂತಿವೆ.<br><br>1) ಇಂದಿರಮ್ಮ ಎ. ಎಂ & ಡಾ ಬಿ. ಕೆ . ರಾಮಯ್ಯ ಪಾಲಿಟೆಕ್ನಿಕ್, ಬೆಂಗಳೂರು (ಐ ಆರ್ ಪಾಲಿಟೆಕ್ನಿಕ್)<br>2) ಬಿ. ಟಿ ಎಲ್ ಪಾಲಿಟೆಕ್ನಿಕ್, ಬೆಂಗಳೂರು<br>3) ನಾಡಗಿರ್ ಡೇ ಪಾಲಿಟೆಕ್ನಿಕ್, ರಾಜಾಜಿನಗರ, ಬೆಂಗಳೂರು<br>4) ಆರ್. ಎನ್. ಶೆಟ್ಟಿ ಪಾಲಿಟೆಕ್ನಿಕ್, ಬೆಳಗಾಂ<br>5) ಎಸ್ ಎನ್ ಜೆ ಪಿ ಪಾಲಿಟೆಕ್ನಿಕ್, ನಿಡಸೊಸಿ, ಬೆಳಗಾವಿ<br>6) ಬಿ ಎಲ್ ಡಿ ಇ ಪಾಲಿಟೆಕ್ನಿಕ್, ಬಿಜಾಪುರ<br>7) ರಾಮಕೃಷ್ಣ ಪಾಲಿಟೆಕ್ನಿಕ್, ಶ್ರೀನಿವಾಸಪುರ<br>8) ಟಿ ಎಂ ಎ ಇ ಸೊಸೈಟಿ ಪಾಲಿಟೆಕ್ನಿಕ್, ಜೆಡಿ ಕಟ್ಟೆ, ಭದ್ರಾವತಿ |
| | | 9) ಕಾವೇರಿ ಪಾಲಿಟೆಕ್ನಿಕ್, ಗೋಣಿಕೊಪ್ಪ<br>10) ಗೌಪಿಯ ಮಹಿಳಾ ಪಾಲಿಟೆಕ್ನಿಕ್, ಬೆಂಗಳೂರು<br>11) ಸಿದ್ಧರಾಮೇಶ್ವರ ಪಾಲಿಟೆಕ್ನಿಕ್, ಹಾಸನ ರಸ್ತೆ, ತಿಪಟೂರು<br>12) ಎಸ್.ವಿ.ಸಿ ಪಾಲಿಟೆಕ್ನಿಕ್, ದಾಂಡೇಲಿ<br>13) ವಿವೇಕಾನಂದ ಪಾಲಿಟೆಕ್ನಿಕ್, ಪುತ್ತೂರು<br>14) ಬಾಹುಬಲಿ ಪಾಲಿಟೆಕ್ನಿಕ್, ಶ್ರವಣಬೆಳಗೊಳ<br>15) ಕೆ. ಐ.ಇ. ಟಿ ಪಾಲಿಟೆಕ್ನಿಕ್, ಕನಕಪುರ ರಸ್ತೆ, ಬೆಂಗಳೂರು<br>16) ನಿಟ್ಟೂರು ಪಾಲಿಟೆಕ್ನಿಕ್, ಬೀದರ್ |
| **(ಆ)** | ಈ ಆದೇಶ ಅನುಷ್ಠಾನವಾಗದಿರಲು ಕಾರಣಗಳೇನು; | ಮೇಲಿನ ಖಾಸಗಿ ಪಾಲಿಟೆಕ್ನಿಕ್‌ಗಳನ್ನು ಸರ್ಕಾರದ ವೇತನಾನುದಾನಕ್ಕೆ ಒಳಪಡಿಸುವ ಪ್ರಸ್ತಾವನೆಯ ಬಗ್ಗೆ ಸಹಮತಿ ಕೋರಿ ಕಡತವನ್ನು ಆರ್ಥಿಕ ಇಲಾಖೆಗೆ ಸಲ್ಲಿಸಲಾಗಿತ್ತು.<br>ಆರ್ಥಿಕ ಇಲಾಖೆಯ ಅಭಿಪ್ರಾಯದ ಮೇರೆಗೆ ಸರ್ಕಾರದ ಪತ್ರ ಸಂಖ್ಯೆ:ಇಡಿ 101 ಟಿಪಿಇ 2012, ದಿನಾಂಕ:18.10.2019ರಲ್ಲಿ ಉನ್ನತ ಶಿಕ್ಷಣ ವಲಯದಲ್ಲಿ ಈಗಾಗಲೇ ಅನುದಾನಕ್ಕೆ ಒಳಪಡಿಸಲಾಗಿರುವ 44 ಪಾಲಿಟೆಕ್ನಿಕ್‌ಗಳಿಗೆ ಒದಗಿಸಲಾಗಿರುವ ಅನುದಾನವು ಸಾಕಾಗದೆ |

| | | |
|---|---|---|
| | | ಇರುವ ಅಂಶವನ್ನು ಗಮನಿಸಿದಾಗ ಹೊಸ ಪಾಲಿಟೆಕ್ನಿಕ್‌ಗಳನ್ನು ಅನುದಾನಕ್ಕೆ ಒಳಪಡಿಸಿದಾಗ ಅದರಿಂದ ಹೆಚ್ಚಿನ ಆರ್ಥಿಕ ಹೊರೆ ಉಂಟಾಗಲಿದ್ದು, ಈಗಾಗಲೇ ಪ್ರಾರಂಭಿಸಿರುವ ಕಾಲೇಜುಗಳಿಗೆ ಮತ್ತು ಪಾಲಿಟೆಕ್ನಿಕ್‌ಗಳಿಗೆ ಅಗತ್ಯವಾದ ಮೂಲ ಸೌಲಭ್ಯಗಳನ್ನು ಒದಗಿಸಲು ಸಂಪನ್ಮೂಲದ ಕೊರತೆ ಇದ್ದು, ಯುಜಿಸಿ, ಎಐಸಿಟಿಇ ಮತ್ತು 6ನೇ ರಾಜ್ಯವೇತನ ಪರಿಷ್ಕರಣೆಯಿಂದ ಸರ್ಕಾರಕ್ಕೆ ಹೆಚ್ಚಿನ ಆರ್ಥಿಕ ಹೊರೆ ಈಗಾಗಲೇ ಉಂಟಾಗಿರುವ ಹಿನ್ನಲೆಯಲ್ಲಿ, ಸರ್ಕಾರವು ತನ್ನ ಸಂಸ್ಥೆಗಳನ್ನು ಬಲಪಡಿಸಲು ಅಗತ್ಯ ಅನುದಾನವನ್ನು ನೀಡಲು ಮೊದಲ ಆದ್ಯತೆ ನೀಡಬೇಕಾಗಿರುತ್ತದೆ. ಆದ್ದರಿಂದ, ಸದರಿ ಖಾಸಗಿ ಪಾಲಿಟೆಕ್ನಿಕ್‌ಗಳನ್ನು ಅನುದಾನಕ್ಕೆ ಒಳಪಡಿಸಲು ಉದ್ದೇಶಿಸಿರುವ ಪ್ರಸ್ತಾವನೆಯನ್ನು ಸದ್ಯಕ್ಕೆ ಕೈಬಿಡಲಾಗಿದೆಯೆಂದು ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ರವರಿಗೆ ತಿಳಿಸಲಾಗಿದೆ. |

**ಇಡಿ 88 ಟಿಪಿಇ 2022**

**(ಡಾ|| ಅಶ್ವತ್ಥನಾರಾಯಣ್.ಸಿ.ಎನ್)**
ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ,
ವಿದ್ಯುನ್ಮಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ
ಹಾಗೂ ಜೀವನೋಪಾಯ ಇಲಾಖೆ ಸಚಿವರು